## ಅನುಬಂಧ - 7

## ಪ್ರಕಟಿತ ಗ್ರಂಥಗಳಿಗೆ ಧನಸಹಾಯ-ಯೋಜನೆಯ ನಿಯಮಗಳು

1. ಪ್ರಕಟಿತ ಗ್ರಂಥಗಳ ಲೇಖಕರಿಂದ ಮಾತ್ರ ಅರ್ಜಿಯನ್ನು ಸ್ವೀಕರಿಸಲಾಗುವುದು. ಯಾವುದೇ ಪ್ರಕಾಶನ ಅಥವಾ ಪ್ರಕಟಣಾ ಸಂಸ್ಥೆಗಳು ಸಲ್ಲಿಸುವ ಕೃತಿಗಳನ್ನು ಪರಿಗಣಿಸಲಾಗುವುದಿಲ್ಲ.

2. ಪ್ರಕಟಿತ ಗ್ರಂಥಗಳ ಒಟ್ಟು 1000 ಪ್ರತಿಗಳಿಗೆ ತಗುಲಿದ ಮುದ್ರಣ ವೆಚ್ಚದ ಅರ್ಧದಷ್ಟು ಇಲ್ಲವೇ ರೂ.20,000/- ಗಳು ಇದರಲ್ಲಿ ಯಾವುದು ಕಡಿಮೆಯೋ ಅಷ್ಟನ್ನು ಮಾತ್ರ ಸಹಾಯ ಧನವನ್ನಾಗಿ ನೀಡಲಾಗುವುದು.

3. ಸೃಜನೇತರ ಪ್ರಕಾರಕ್ಕೆ ಸೇರಿದ ಜಾನಪದ, ವೈಜ್ಞಾನಿಕ, ಐತಿಹಾಸಿಕ, ಸಾಂಸ್ಕೃತಿಕ, ಪ್ರವಾಸ ಕಥನ ಮತ್ತು ವ್ಯಕ್ತಿ ವಿಶೇಷ ಕುರಿತ ಸಾಹಿತ್ಯಿಕ ಮೌಲ್ಯವುಳ್ಳ ವಿಮರ್ಶಾತ್ಮಕ ಗ್ರಂಥಗಳಿಗೆ ಮಾತ್ರ ಧನಸಹಾಯ ನೀಡಲಾಗುವುದು. ಸೃಜನಶೀಲ ಪ್ರಕಾರಕ್ಕೆ ಸೇರಿದ ಅಂದರೆ ಕಥೆ, ಕಾದಂಬರಿ, ಕಾವ್ಯ, ನಾಟಕ, ಹರಟೆ, ಮಕ್ಕಳ ಸಾಹಿತ್ಯ ಹಾಗೂ ಭಾಷಾಂತರ ಕೃತಿಗಳು, ಯಾವುದೇ ಪರಿಶ್ರಮವಿಲ್ಲದ ಸಂಪಾದಿತ ಸಂಗ್ರಹಗಳು (ವಿದ್ವತ್ಪೂರ್ಣ, ವ್ಯಾಖ್ಯಾನ, ವಿಮರ್ಶೆ, ಮುನ್ನುಡಿಗಳಿಲ್ಲದ) ಸಂಭಾವನಾಗ್ರಂಥ, ಸಂಸ್ಮರಣ ಗ್ರಂಥ, ಅಭಿನಂದನಾ ಗ್ರಂಥ, ನೆನಪಿನ ಸಂಚಿಕೆಗಳ ಜೊತೆಗೆ ಧಾರ್ಮಿಕ ಗ್ರಂಥಗಳನ್ನು ಪರಿಗಣಿಸಲಾಗುವುದಿಲ್ಲ.

4. ಪಠ್ಯ ಪುಸ್ತಕಗಳು, ಕೈಪಿಡಿಗಳು, ಮಾರ್ಗದರ್ಶಿ ಸೂತ್ರಗಳು ಮತ್ತು ಯಾವುದೇ ಪದವಿಗಾಗಿ ಸಿದ್ಧಪಡಿಸಿದ ಗ್ರಂಥಗಳನ್ನು ಸಹಾಯಧನಕ್ಕೆ ಪರಿಗಣಿಸಲಾಗುವುದಿಲ್ಲ.

5. ಬೇರೆ ಮೂಲಗಳಿಂದ ಧನಸಹಾಯ ಪಡೆದು ಪ್ರಕಟಿಸಿರುವ ಕೃತಿಗಳನ್ನು ಪರಿಗಣಿಸಲಾಗುವುದಿಲ್ಲ.

6. ಈ ಆರ್ಥಿಕ ವರ್ಷದ ಹಿಂದಿನ ಸಾಲಿನಲ್ಲಿ ಪ್ರಥಮಾವೃತ್ತಿಯಾಗಿ ಪ್ರಕಟವಾದ ಕೃತಿಗಳನ್ನು ಮಾತ್ರ ಸಲ್ಲಿಸಬೇಕು. ಸಲ್ಲಿಸುವ ಕೃತಿ ಕನಿಷ್ಠ 100 ಪುಟಗಳನ್ನೊಳಗೊಂಡಿರಬೇಕು.

7. ಲೇಖಕರು ಕೃತಿಯ 3 ಪ್ರತಿಗಳನ್ನು ಮಾತ್ರ ಅರ್ಜಿ ಜೊತೆ ಸಲ್ಲಿಸಬೇಕು. ಈಗಾಗಲೇ 3 ಸಲ ಧನಸಹಾಯ ಪಡೆದವರು, ಪ್ರಸ್ತುತ ಯೋಜನೆಯಡಿ ಪುನಃ ಅರ್ಜಿ ಸಲ್ಲಿಸುವಂತಿಲ್ಲ.

8. ಗ್ರಂಥದ ಒಟ್ಟು 1000 ಪ್ರತಿಗಳಿಗೆ ಮಾತ್ರ ತಗುಲಿದ ಮುದ್ರಣ ವೆಚ್ಚದ ಬಿಲ್ಲನ್ನು ಮುದ್ರಣಾಲಯದಿಂದ ಪಡೆದು ಅರ್ಜಿಯ ಜೊತೆ ಲಗತ್ತಿಸಬೇಕು.

9. ಧನಸಹಾಯಕ್ಕಾಗಿ ಅರ್ಜಿ ಸಲ್ಲಿಸುವವರು ಕೃತಿ ವಿಮರ್ಶೆಗಾಗಿ ವಿಮರ್ಶಕರ ಸಂಭಾವನೆಯನ್ನು ಪಾವತಿಸಲು ಪರಿಶೀಲನಾ ಶುಲ್ಕವನ್ನು ಕಟ್ಟಬೇಕಾಗುತ್ತದೆ. 100 ಪುಟಗಳ ಕೃತಿಗೆ ರೂ.100/-ರಂತೆ ಮತ್ತು ಅನಂತರದ 100 ಪುಟಗಳಿಗೆ ರೂ.50/- ರಂತೆ ಲೆಕ್ಕಹಾಕಿ ಆಷ್ಟು ಮೊತ್ತವನ್ನು ಜಿಲ್ಲಾ ಸಹಾಯಕ ನಿರ್ದೇಶಕರುಗಳ ಕಚೇರಿ ಅಥವಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಗದು ಶಾಖೆ ಅಥವಾ ರಾಜ್ಯದ ಯಾವುದೇ ಖಜಾನೆಗೆ 0202 ಶಿಕ್ಷಣ, ಕ್ರೀಡೆ, ಕಲೆ ಮತ್ತು ಸಂಸ್ಕೃತಿ-04 ಕಲೆ ಮತ್ತು ಸಂಸ್ಕೃತಿ-800 ಇತರೆ ರಸೀದಿ-0 ಇತರೆ -04 ಇತರೆ ಬಾಬ್ತು ಶೀರ್ಷಿಕೆಗೆ ಸಂದಾಯ ಮಾಡಿ ಚಲನ್ : ರಸೀದಿಯನ್ನು ಅರ್ಜಿ ಜೊತೆ ಲಗತ್ತಿಸಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-560 002 ಇವರಿಗೆ ಕಳುಹಿಸಬೇಕು.

10. ಮೇಲಿನ ನಿಯಮಗಳಿಗೆ ಒಳಪಟ್ಟಿರುವ ಗ್ರಂಥಗಳನ್ನು ಆಯಾ ವಿಷಯ ಪರಿಣತರಿಗೆ ಕಳುಹಿಸಿ ಅಭಿಪ್ರಾಯ ಪಡೆಯಲಾಗುವುದು. ಪರಿಣತರಿಂದ ಶಿಫಾರಸ್ಸಾದ ಗ್ರಂಥಗಳಿಗೆ ಮಾತ್ರ ಸಹಾಯಧನ ನೀಡಲಾಗುವುದು.

11. ಮೇಲೆ ತಿಳಿಸಿರುವ ಅಂಶಗಳಿಗೆ ಒಳಪಟ್ಟು ಬಂದ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು. ಯಾವುದೇ ಕಾರಣಕ್ಕೂ ಪುಸ್ತಕಗಳನ್ನು ಹಾಗೂ ವಿಮರ್ಶಾ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

12. ನಿಗದಿತ ಅರ್ಜಿ ನಮೂನೆಯನ್ನು ಇಲಾಖೆಯ ಜಿಲ್ಲಾ ಸಹಾಯಕ ನಿರ್ದೇಶಕರುಗಳ ಕಚೇರಿಯಲ್ಲಿ ಅಥವಾ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-02 ಇಲ್ಲಿಂದ ಖುದ್ದಾಗಿ ಪಡೆಯಬಹುದಾಗಿದೆ.

13. ಇಲಾಖೆಯು ಪ್ರಕಟಿಸಿದ ಅವಧಿಯೊಳಗೆ ಅರ್ಜಿಯನ್ನು ಸಲ್ಲಿಸಲು ಅವಕಾಶವಿರುತ್ತದೆ.

(ಮಲ್ಲಿಕಾರ್ಜುನ)
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ.